# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ನಿಯಮ 330 ಎ ರಡಿ ನೀಡಿರುವ ಸೂಚನೆಗೆ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಹೇಳಿಕೆ.

ಸೂಚನೆಯ ವಿವರ: ರಾಜ್ಯದಲ್ಲಿ ಅಕ್ರಮವಾಗಿ ಬಿಪಿಎಲ್ ಕಾರ್ಡ್ ದಂಧೆಯು ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್ ಸಿಗದೇ, ಸ್ಥಿತಿವಂತರಿಗೆ ಬಿಪಿಎಲ್ ಕಾರ್ಡ್ ದೊರಕುತ್ತಿರುವುದು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿರುವುದು ದುರ್ದೈವದ ಸಂಗತಿಯಾಗಿದೆ. ವಾರ್ಷಿಕ 1.20 ಲಕ್ಷ ರೂ. ಗಿಂತ ಹೆಚ್ಚು ವರಮಾನ, ಹಳ್ಳಿಗಳಲ್ಲಿ 7.5 ಎಕರೆಗಿಂತ ಹೆಚ್ಚು ಭೂವಿ ಹೊಂದಿದ್ದರೆ, ನಗರದಲ್ಲಿ 1 ಸಾವಿರ ಚದರ ಅಡಿಗಿಂತಯ ಹೆಚ್ಚು ವಿಸ್ತೀರ್ಣದ ಮನೆ ಇದ್ದರೆ, ನಿವೃತ್ತ ಸರ್ಕಾರಿ ನೌಕರರು, ಬೈಕು, ಕಾರು ಇನ್ನಿತರೆ ಸೌಲಭ್ಯ ಹೊಂದಿರುವ ಕುಟುಂಬಳು ಬಿಪಿಎಲ್ ಕಾರ್ಡ್ ಹೊಂದಿದ್ದರೆ ಅವು ಅಕ್ರಮ ಎಂದು ಪರಿಗಣಿಸಲಾಗುತ್ತದೆ. ಇಂತವರುಗಳು ನಕಲಿ ದಾಖಲಾತಿಗಳನ್ನು ಸೃಷ್ಠಿಸಿ, ಬಿಪಿಎಲ್ ಕಾರ್ಡ್‌ಗಳನ್ನು ದಕ್ಕಿಸಿಕೊಳ್ಳುತ್ತಿರುವುದು ನಿಜಕ್ಕೂ ಸಮಾಜಕ್ಕೆ ಹಾಗೂ ಇಡೀ ರಾಜ್ಯಕ್ಕೆ ಮಾರಕವಾಗಿದೆ. ಇದರಿಂದ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದ್ದು, ಇದು ಮುಂದುವರೆದಲ್ಲಿ ಸಮಾಜಕ್ಕೆ ಹಾಗೂ ನಮ್ಮ ರಾಜ್ಯಕೆಕ ಕೆಟ್ಟ ಹೆಸರು ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದರಿಂದ ತಿಳಿದು ಬರುವುದು ಏನೆಂದರೆ, ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳ ವೈಫಲ್ಯತೆಯು ಎದ್ದು ಕಾಣುತ್ತದೆ. ಹಾಗಾಗಿ, ಬಿಪಿಎಲ್ ಕಾರ್ಡ್ ವಿತರಣೆ ಸಂದರ್ಭದಲ್ಲಿ ಪಾರದರ್ಶಕತೆ ಅಳವಡಿಸಿಕೊಳ್ಳುವುದು ನ್ಯಾಯಸಮ್ಮತವಾಗಿರುತ್ತದೆ.

ಉತ್ತರ: ರಾಜ್ಯದಲ್ಲಿ ಒಟ್ಟು 1,26,92,394 ಬಿಪಿಎಲ್ (ಅಂತ್ಯೋದಯ + ಆದ್ಯತಾ ಕುಟುಂಬ) ಪಡಿತರ ಚೀಟಿಗಳಿದ್ದು, ಇದರಲ್ಲಿ 4,29,37,959 ಸದಸ್ಯರಿರುತ್ತಾರೆ.

| ಪಡಿತರಚೀಟಿ ವಿಧ | ಅಂತ್ಯೋದಯಅನ್ನಯೋಜನೆ (AAY) | | ಆದ್ಯತಾಕುಟುಂಬ (PHH/ BPL) | | ಆದ್ಯತೇತರಕುಟುಂಬ (NPHH/ APL) | |
|---|---|---|---|---|---|---|
| | ಪಡಿತರಚೀಟಿ | ಸದಸ್ಯರು | ಪಡಿತರಚೀಟಿ | ಸದಸ್ಯರು | ಪಡಿತರಚೀಟಿ | ಸದಸ್ಯರು |
| IRA | 68,621 | 3,01,642 | 19,07,419 | 66,67,216 | 8,55,957 | 32,06,779 |
| ನಗರ | 81,159 | 3,44,186 | 14,42,941 | 48,79,659 | 2,80,963 | 9,94,106 |
| ಒಟ್ಟು ನಗರ | **1,49,780** | **6,45,828** | **33,50,360** | **1,15,46,875** | **11,36,920** | **42,00,885** |
| ಗ್ರಾಮಾಂತರ | 9,44,380 | 40,11,671 | 82,47,874 | 2,67,33,585 | 8,91,551 | 30,31,198 |
| ಒಟ್ಟು | **10,94,160** | **46,57,499** | **1,15,98,234** | **3,82,80,460** | **20,28,471** | **72,32,083** |

ಕೇಂದ್ರ ಸರ್ಕಾರವು ಸಹಾಯಧನಯುಕ್ತ ಆಹಾರಧಾನ್ಯವನ್ನು ಈ ಕೆಳಕಂಡ ಸದಸ್ಯರಿಗೆ ಬಿಡುಗಡೆ ಮಾಡುತ್ತಿದೆ.

| COVERAGE | ಪಡಿತರಚೀಟಿ ಸದಸ್ಯರ ಸಂಖ್ಯೆ |
|---|---|
| ಭಾರತ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯ ವ್ಯಾಪ್ತಿಗೆ ಬರುವ ಸದಸ್ಯರ ಸಂಖ್ಯೆ | 4,01,93,130 |
| Excess coverage | 27,44,829 |
| ರಾಜ್ಯ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯ ವ್ಯಾಪ್ತಿಗೆ ಬರುವ ಸದಸ್ಯರ ಸಂಖ್ಯೆ (February - 2020) | 4,29,37,959 |

ರಾಜ್ಯ ಸರ್ಕಾರವು ಸಾರ್ವಜನಿಕ ಪಡಿತರ ವಿತರಣಾ ಪದ್ಧತಿಯಡಿ ಆದ್ಯತೇತರ ಕುಟುಂಬಗಳನ್ನು ಗುರುತಿಸಲು ಪಡಿತರ ಚೀಟಿ ವಿತರಣೆ ಮಾಡಲು "ಹೊರಗಿಡುವ ಮಾನದಂಡ (Exclusion Criteria)" ಈ ಕೆಳಗಿನಂತೆ ನಿಗಧಿಪಡಿಸಿದೆ.

1) ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಕುಟುಂಬಗಳು ಇತ್ಯಾದಿ ಒಳಗೊಂಡಂತೆ ಆದಾಯತೆರಿಗೆ/ ಸೇವಾ ತೆರಿಗೆ/ ವ್ಯಾಟ್/ ವೃತ್ತಿತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

2) ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ನಗರ ಪ್ರದೇಶದಲ್ಲಿ 1000 ಚದರಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

3) ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನವನ್ನು ಹೊಂದಿರುವಎಲ್ಲಾ ಕುಟುಂಬಗಳು.

4) ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಮೇಲಿನ ಮಾನದಂಡಗಳನ್ವಯ ಫಲಾನುಭವಿಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಪಡಿತರ ಚೀಟಿ ಪಡೆಯುವಾಗ ಅರ್ಜಿದಾರರು ಕಡ್ಡಾಯವಾಗಿ "ಆಧಾರ್ ಸಂಖ್ಯೆ" ಹಾಗೂ ಕಂದಾಯ ಇಲಾಖೆಯಿಂದ ಸ್ವೀಕರಿಸಿದ "ಆದಾಯ ಧೃಡೀಕರಣ ಪತ್ರ" ಕಡ್ಡಾಯವಾಗಿ ಸಲ್ಲಿಸಬೇಕು. ಬಿ.ಪಿ.ಎಲ್. ಅರ್ಹತೆಯನ್ನು ಕಂದಾಯ ಇಲಾಖೆ ನೀಡಿರುವ ಆದಾಯ ಧೃಡೀಕರಣ ಪತ್ರದ ಆಧಾರದ ಮೇಲೆ ನೀಡಲಾಗುತ್ತಿದೆ.

**4) ಅನರ್ಹರು ಪಡಿತರ ಚೀಟಿಯನ್ನು ಪಡೆದಿರುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವ ಸಲುವಾಗಿ ಈ ಕೆಳಗಿನಂತೆ ಪಾರದರ್ಶಕತೆಯನ್ನು ಅಳವಡಿಸಿಕೊಳ್ಳಲಾಗಿದೆ.**

ಅ) ಪಡಿತರ ಚೀಟಿಯ ಎಲ್ಲಾ ಸದಸ್ಯರ ಆಧಾರ್ ಸಂಖ್ಯೆಯನ್ನು ಪಡಿತರ ಚೀಟಿಯೊಂದಿಗೆ ಜೋಡಣೆ ಮಾಡಲಾಗಿದೆ.

ಆ) ಕುಟುಂಬ ಸದಸ್ಯರ ಆಧಾರ್ ಸಂಖ್ಯೆಯೊಂದಿಗೆ ಇ-ಕೆವೈಸಿ ಪ್ರಕ್ರಿಯೆಯನ್ನು ಕೈಗೊಂಡು ಆಧಾರ್ ಮಾಹಿತಿಯ ನೈಜತೆಯನ್ನು ಧೃಡೀಕರಿಸಿಕೊಳ್ಳಲಾಗುತ್ತಿದೆ.

ಇ) ಸಾರಿಗೆ ಇಲಾಖೆ, ಹೆಚ್.ಆರ್.ಎಂ.ಎಸ್. ದತ್ತಾಂಶ, ವಿವಿಧ ನಿಗಮ ಮಂಡಳಿ ಸಿಬ್ಬಂದಿ ವಿವರ, ನಗರಾಭಿವೃದ್ಧಿ ಇಲಾಖೆಯಲ್ಲಿ 1000 ಚ.ಅಡಿಗಿಂತ ಹೆಚ್ಚಿನ ವಿಸ್ತೀರ್ಣವುಳ್ಳ ವಾಸದ ಮನೆಗಳ ಮಾಹಿತಿ, ಭೂಮಿ ದತ್ತಾಂಶ ಸೇರಿದಂತೆ ವಿವಿಧ ಇಲಾಖೆಗಳ ಮಾಹಿತಿಯನ್ನು ಭೌತಿಕವಾಗಿ ಸಂಗ್ರಹಿಸಿ, ಇಲಾಖೆಯಿಂದ ವಿತರಿಸಲಾದ ಪಡಿತರ ಚೀಟಿಯ ಮಾಹಿತಿಯೊಂದಿಗೆ ತಾಳೆ ಮಾಡಿ, ಅನರ್ಹ ಪಡಿತರ ಕುಟುಂಬಗಳನ್ನು ರದ್ದುಪಡಿಸಲು ಹಾಗೂ ಬಿ.ಪಿ.ಎಲ್. ಪಡಿತರ ಚೀಟಿಯಿಂದ ಎ.ಪಿ.ಎಲ್. ಪಡಿತರ ಚೀಟಿಯನ್ನಾಗಿ ಬದಲಾಯಿಸಲು ಕ್ರಮ ವಹಿಸಲಾಗಿದೆ. ಅದರಂತೆ ರಾಜ್ಯದಲ್ಲಿ ಒಟ್ಟು 63,922 ಪಡಿತರ ಚೀಟಿಗಳನ್ನು ರದ್ದುಪಡಿಸಿ ಮತ್ತು ಪಡಿತರ ಚೀಟಿಗಳ ವಿಧವನ್ನು ಎ.ಪಿ.ಎಲ್. ಪಡಿತರ ಚೀಟಿಯನ್ನಾಗಿ ಮಾರ್ಪಾಡಿಸಿದೆ. ಇದರಿಂದಾಗಿ ರೂ. 92,18,034/- ಗಳ ದಂಡ ಶುಲ್ಕವನ್ನು ಸದರಿ ಅನರ್ಹ ಪಡಿತರ ಚೀಟಿದಾರರಿಂದ ವಸೂಲಿ ಮಾಡಿ, ಸರ್ಕಾರಕ್ಕೆ ಕಟ್ಟಿಸಿಕೊಳ್ಳಲಾಗಿದೆ.

ಆನಾಸ 38 ಡಿಆರ್ಎ 2020 (ಇ-ಅಫೀಸ್)

---

(ಕೆ. ಗೋಪಾಲಯ್ಯ)
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು